## ನನ್ನ ಕಥಾಪ್ರಸಂಗ

ಕಥೆ ಒಂದರ ಸೃಜನಶೀಲ ಗರ್ಭದಲ್ಲಿ ಮುಳುಗಿದ ಕೂಡಲೇ ನನ್ನ ಲೋಕಾನುಭವವು ಕೇವಲ ನನ್ನದಾಗಿರುವುದಿಲ್ಲ. ಅದು ಮಾನವ ಭಾವವಾಗಿರುತ್ತದೆ. ಅದು ಕರುಳುಬಳ್ಳಿಯ ಭಾಷೆಯದಾಗಿರುತ್ತದೆ. ಮನುಷ್ಯ ಪ್ರಜ್ಞೆಯೇ ಅಲ್ಲಿ ಬೇರಾಗಿರುತ್ತದೆ. ಹೀಗಾಗಿ ಪ್ರಜ್ಞಾಪೂರ್ವಕವಾಗಿ ಸೃಜನಶೀಲ ನಡೆ ಸಾಧ್ಯವಿಲ್ಲ. ಅನಾದಿ ಭಾವಗಳಿಗೆ ಆದಿ ಅಂತ್ಯಗಳಿಲ್ಲ. ನನ್ನ ಭಾವ ಜಗತ್ತು ಅನಂತವಾದದ್ದು. ಅದು ಯಾವುದೊ ಒಂದು ಕಾಲದ ಪ್ರಜ್ಞೆಯ ಹಂಗಿಗೆ ಒಳಪಟ್ಟಿರುವುದಿಲ್ಲ. ಈತನಕ ನಾನು ನನ್ನ ಸೃಜನಶೀಲ ತಾಯ್ತನವನ್ನು ಪ್ರಜ್ಞಾಪೂರ್ವಕವಾಗಿ ಬಳಸಿಲ್ಲ. ಅದು ಒಂದು ಜೈವಿಕ ಪ್ರಕ್ರಿಯೆ. ವರ್ತಮಾನದ ತುರ್ತಿನ ಪ್ರಜ್ಞೆ ಬೇರೆ... ಸುಪ್ತ ಪ್ರಜ್ಞೆಯ ಗಾಯದ ದುಃಖದ ಸಂಕಟ ಬೇರೆ. ಎರಡಕ್ಕೂ ಅಭಿವ್ಯಕ್ತಿಯ ಬೇರೆ ಬೇರೆ ಕ್ರಮಗಳಿಗೆ ವೈಚಾರಿಕವಾದ ಅಭಿವ್ಯಕ್ತಿಗಳಿಗೆ ಒಂದು ತರ್ಕ, ಗುರಿ, ಕ್ರಮ ಹಾಗೂ ಪ್ರಜ್ಞಾಪೂರ್ವಕ ನಿರೂಪಣೆ ಬೇಕು. ಸೃಜನಶೀಲ ನಿವೇದನೆಗೆ ತರ್ಕ ಹಾಗೂ ವರ್ತಮಾನದ ನಿರ್ದಿಷ್ಟ ಪ್ರಜ್ಞೆಯ ಅಗತ್ಯವಿಲ್ಲ. ಅದರ ಹಂಗಿನಲ್ಲಿ ಕಥೆ ಬರೆದರೆ ತಪ್ಪೇನೂ ಇಲ್ಲ. ಎಲ್ಲ ಧರ್ಮಗಳು ಉದ್ದೇಶಪೂರ್ವಕವಾಗಿಯೇ ಕಥೆ ಕಟ್ಟಿ ಹೇಳಿ ಪ್ರದರ್ಶಿಸಿವೆ. ಜಗತ್ತಿನ ಆಧುನಿಕ ಸಣ್ಣ ಕಥೆಗಳ ದಾರಿ ಬೇರೆ. ಕಥೆ ಬರೆಯುವ ಮುನ್ನ ನನ್ನ ಮನಸ್ಸಿನಲ್ಲಿ ಎಲ್ಲ ದೇವರುಗಳೂ ಸತ್ತು ಹೋಗಿರುತ್ತಾರೆ. ಮನುಷ್ಯರ ದಯಾದೀಯ ಲೋಕವೊ, ಅವರೇ ಕಂಡುಕೊಂಡ ಸ್ವರ್ಗವೊ ಎದುರಾಗಿ ತಣ್ಣಗೆ ನನ್ನ ಎದೆಯಲ್ಲಿ ಸಂಕಟದ ದೀಪ ಉರಿಯತೊಡಗುತ್ತದೆ. ಅದರ ಬೆಳಕಲ್ಲಿ ತೋಚಿದ್ದನ್ನು ಸುಮ್ಮನೆ ನಾನೊಂದು ನೆಪ ಎಂಬಂತೆ ನಿವೇದಿಸುವೆ. ಆ ಸ್ಥಿತಿಯಲ್ಲಿ ಬರೆಯುತ್ತಲೇ ನಾನೊಂದು ಬಿಡುಗಡೆಯ ಭಾವದಲ್ಲಿ ಚಡಪಡಿಸುತ್ತಿರುತ್ತೇನೆ. ಬರೆವ ಮುನ್ನವೂ ಕೂಡ ಹಾಗೆಯೇ... ಬರೆವ ಕ್ಷಣ ಮೈ ಮೇಲೆ ಬರುವುದೇ ಯಾವುದೊ ಒಂದು ಕಿಚ್ಚಿನಿಂದ. ಸಂಕಟದಿಂದ. ಅಪಮಾನದಿಂದ. ನಿನ್ನೆಗಳ ನೆನಪುಗಳ ಹೊರೆಯಿಂದ. ನನಗೆ ಗೊತ್ತಿಲ್ಲದೆಯೇ ಏನೊ ಒಂದು ರೂಪಕ ನೆನಪಾಗುತ್ತದೆ. ಅದರಲ್ಲಿ ಕೆಲಗಳಿಗೆ ಮೈಮರೆವೆ. ಯಾವುದೊ ಒಂದು ಘಟನೆ ನನ್ನನ್ನು ಸೃಜನಶೀಲತೆಯ ಯಾವುದೊ ಒಂದು ಬೆಟ್ಟದ ತುದಿಗೆ ಕರೆದೊಯ್ದು ಭಾವದ ರೆಕ್ಕೆಕಟ್ಟಿ ಎತ್ತರದಿಂದ ತಳ್ಳಿ ಬಿಡುತ್ತದೆ. ನನ್ನ ಭಾವ ಜಗತ್ತಿನ ಅಮಾಯಕ ರೆಕ್ಕೆಗಳೇ ನನ್ನ ನಿರೂಪಣೆ. ಇನ್ನೇನೋ ಬಿದ್ದು ನೆಲಕಚ್ಚುವೆ ಎಂಬಲ್ಲಿಗೆ ಕಥೆಯೇ ಒಂದು ಜೀವವಾಗಿ ನೆಗೆದು ಕುಪ್ಪಳಿಸಿ ಮುಂದೆ ಹೋಗಿ ದಿಗಂತದತ್ತ ನೋಡುತ್ತದೆ. ಅಲ್ಲಿಗೆ ಆ ಒಂದು ಕಥೆಯ ಹಕ್ಕಿ ಎಲ್ಲಿಗೊ ಹಾರಿಹೋಗಿರುತ್ತದೆ.

ಪ್ರಜ್ಞಾಪೂರ್ವಕವಾಗಿ ಕಥೆ ಬರೆಯುವುದು ಅಂತಹ ಒಳ್ಳೆಯ ಕ್ರಮ ಅಲ್ಲ. ನಾವು ಬರೆವ ಕಥೆಗಳಿಗೂ ಬಿಡುಗಡೆ ಇರಬೇಕು. ಅದನ್ನು ನಮ್ಮ ರೀತಿ ನೀತಿಗಳ ಚೀಲಗಳಲ್ಲಿ ಬಂಧಿಸಬಾರದು.

ನನ್ನ ಅನುಭವವೇ ನನ್ನ ಭೂಮಿ ಆಕಾಶ, ನನ್ನ ಸುಪ್ತ ಪ್ರಜ್ಞೆಯೇ ನನ್ನ ವಿಶ್ವ. ಸದ್ಯದ ನನ್ನ ಲೋಕಗ್ರಹಿಕೆಯೇ ನನ್ನ ವಾಸ್ತವ. ಕಥೆ ಬರೆವ ಮೊದಲು ಯಾವ ವಿಮರ್ಶಕರೂ, ಗೆಳೆಯರೂ, ಆಪ್ತ ಸಲಹೆಗಾರರೂ ಇರುವುದಿಲ್ಲ. ಇದು ನನ್ನ ಆತ್ಮ ಪ್ರತ್ಯಯವಲ್ಲ. ವಿಮರ್ಶಕರು ನನ್ನ ಪರವೊ ವಿರುದ್ಧವೊ ಅದು ಅನವಶ್ಯಕ ಸಂಗತಿ. ಓದುಗರೇ ಮುಖ್ಯ ಎಂತಲೂ ಅಲ್ಲ. ನಾನು ಹೆಚ್ಚಾಗಿ ಬಾಯಿ ಮಾತಿನ **Oral Criticism**ಗೆ ಒಳಗಾದ ಕಥೆಗಾರ. ತುಂಬ ಜನ ನನ್ನ ಕಥೆಗಳನ್ನು ಮೆಚ್ಚಿ ಮಾತನಾಡಿದ್ದಾರೆ. ಮೊದಲಿಗೆ ನಾನು ಚಿ. ಶ್ರೀನಿವಾಸರಾಜು ಹಾಗೂ ಎಚ್.ಎಸ್. ರಾಘವೇಂದ್ರ ರಾವ್, ರಾಜೇಂದ್ರ ಚೆನ್ನಿ ಅವರ ಆಪ್ತ ಸಲಹೆ, ಪ್ರೀತಿ, ವಿಶ್ವಾಸಗಳಿಂದ ಬರಹದ ಧೈರ್ಯ ತಂದುಕೊಂಡೆ. ನಂತರ ಪಿ. ಲಂಕೇಶ್, ಅನಂತಮೂರ್ತಿ, ತೇಜಸ್ವಿ, ಚಿತ್ತಾಲ, ಜಿ.ಎಸ್. ಶಿವರುದ್ರಪ್ಪ, ಡಿ.ಆರ್. ನಾಗರಾಜ್, ದೇವನೂರ ಮಹಾದೇವ, ಸಿದ್ಧಲಿಂಗಯ್ಯ, ಚದುರಂಗ, ಕಿ.ರಂ.